# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ</u>

## <u>ರಾಣೆಬೆನ್ನೂರು</u>

## <u>ಸಿ.ಸಿ.151/2023</u>

ಪಿರ್ಯಾಧಿ : ಅಬಕಾರಿ ನಿರೀಕ್ಷಕರು
ರಾಣೆಬೆನ್ನೂರು ವಲಯ.

**ವಿರುದ್ಧ**

ಆರೋಪಿ : ನಾಗರಾಜ ತಂದೆ ಹನುಮಂತಪ್ಪ ಕಕ್ಕರಗೋಳ,
ವಾಸಃ ಯಕ್ಲಾಸಪೂರ,
ತಾಃ ರಾಣೆಬೆನ್ನೂರು, ಜಿಃ ಹಾವೇರಿ.

## <u>ದೋಷಾರೋಪಣೆ</u>

ನಾನು ಶ್ರೀಮತಿ ಅನಿತಾ ಓ.ಎ. ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಹೆಚ್ಚುವರಿ ಜೆಎಂಎಫ್‌ಸಿ, ರಾಣೇಬೆನ್ನೂರು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕ 11.04.2023 ರಂದು ರಾತ್ರಿ ಸುಮಾರು 7.10 ಗಂಟೆಗೆ ಅಬಕಾರಿ ಅಧಿಕಾರಿಗಳು ಅಬಕಾರಿ ಅಕ್ರಮಗಳ ಕುರಿತು ಗಸ್ತು ಕರ್ತವ್ಯದಲ್ಲಿದ್ದಾಗ ಬಂದ ಖಚಿತ ಮಾಹಿತಿಯ ಮೇರೆಗೆ ತಮ್ಮ ಸಿಬ್ಬಂದಿಗಳ ಜೊತೆ ರಾಣೆಬೆನ್ನೂರಿನ ಮೇಡ್ಲೇರಿ ಗ್ರಾಮಕ್ಕೆ ಹೋದಾಗ ಸದರಿ ಗ್ರಾಮದ ಬಸ್ ನಿಲ್ದಾಣದ ಮುಂದೆ ಆರೋಪಿತರಾದ ನೀವು ಗೊಬ್ಬರದ ಚೀಲದಲ್ಲಿ ಅಕ್ರಮವಾಗಿ ಯಾವುದೇ ಪರವಾನಗೆ ಇಲ್ಲದೇ 13.860 ಲೀಟರ್ ಮದ್ಯವನ್ನು ಹಿಡಿದುಕೊಂಡು ನಿಂತಿದ್ದಾಗ ಸಿಕ್ಕಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32(1) ಹಾಗೂ 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದೀರಾ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1: ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ ಅಥವಾ ಅರ್ಥವಾಯಿತೇ ?

ಉತ್ತರ : **ಅರ್ಥವಾಯಿತು**

ಪ್ರಶ್ನೆ 2: ನೀವು ಈ ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರ : **ವಿಚಾರಣೆಯಾಗಬೇಕಿದೆ.**

(ಮೇಲಿನಂತೆ ಆರೋಪಣೆ ಓದಿ ಹೇಳಿ ಆರೋಪಿಯು ನೀಡಿದ ಉತ್ತರವನ್ನು ನಮೂದು ಮಾಡಿ ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವುದರಿಂದ ವಿಚಾರಣೆಯನ್ನು ನಡೆಯಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ)

Sd/-

ದಿನಾಂಕಃ 12/03/2024

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ರಾಣೆಬೆನ್ನೂರು

**ಆರೋಪಿಯ ಸಹಿ**